# ವೀನಸ್: ವಯಸ್ಸಿಗೇ ಸವಾಲು

ಈ ಅಂಕಣ ಬರೆಯುವ ಹೊತ್ತಿಗೆ ಯುಎಸ್ ಓಪನ್ ಟೆನಿಸ್ ಪ್ರಶಸ್ತಿ ಯಾರ ಮುಡಿಗೇರಿದೆ ಎನ್ನುವುದು ನಿರ್ಧಾರ ಆಗಿರಲಿಲ್ಲ. ಆದರೆ ವೀನಸ್ ವಿಲಿಯಮ್ಸ್ ಸೆಮಿಫೈನಲ್‌ನಲ್ಲಿ ಸ್ಲೊವಾನ್ ಸ್ಟೀಫನ್ಸ್ ಎದುರು ಸೋಲು ಅನುಭವಿಸಿ ನಿರ್ಗಮಿಸಿಯಾಗಿದೆ. ಫೈನಲ್‌ನಲ್ಲಿ ಯಾರೇ ಗೆಲ್ಲಲಿ, ಈ ಸಲ ಯುಎಸ್ ಓಪನ್‌ನಲ್ಲಿ ಸೋತು ಗೆದ್ದವಳು ವೀನಸ್ ವಿಲಿಯಮ್ಸ್ ಎನ್ನುವುದು ನಿಸ್ಸಂಶಯ. 37ರ ಹರೆಯದಲ್ಲಿ ಪ್ರತಿಷ್ಠಿತ ಟೂರ್ನಿಯೊಂದರ ಸೆಮಿಫೈನಲ್‌ವರೆಗೆ ಗೆಲ್ಲುತ್ತಾ ಬರುವುದೇ ಒಂದು ಅದ್ಭುತ.

ಟೆನಿಸ್ ಎನ್ನುವುದು ಹದಿಹರೆಯದವರ ಆಟ. ಮಹಿಳೆಯರಿಗಾದರೆ 18ರಿಂದ 28 ಟೆನಿಸ್‌ನ ಸ್ವರ್ಣವಯಸ್ಸು. ಏಕೆಂದರೆ ಟೆನಿಸ್‌ಗೆ ಮುಖ್ಯವಾಗಿ ಬೇಕಾಗಿರುವುದೇ ದೈಹಿಕ ಫಿಟ್‌ನೆಸ್. ದೇಹ ಚುರುಕಾಗಿದ್ದರೆ ಇಡೀ ಕೋರ್ಟಿನಲ್ಲಿ ಓಡಾಡಿಕೊಂಡು ಭುಜಬಲ ಪರಾಕ್ರಮ ಮೆರೆಯುವುದು ಸುಲಭ. ಅಪರೂಪಕ್ಕೆ ಸೆರೆನಾಳಂತಹ ಒಂದಿಬ್ಬರು ತಾರೆಯರು, ವಯೋಮಾನದ ಈ ನಿಯಮಗಳನ್ನು ಮುರಿದು ಮುನ್ನುಗ್ಗಿದ್ದುಂಟು. ಮಾರ್ಟಿನಾ ಹಿಂಗಿಸ್ 16ರ ಹರೆಯದಲ್ಲೇ ಫ್ರೆಂಚ್ ಓಪನ್ ಟೆನಿಸ್ ಚಾಂಪಿಯನ್‌ಷಿಪ್ ಗೆದ್ದಿದ್ದು ದಾಖಲೆ. ಹಾಗೆಯೇ ಕಳೆದ ವರ್ಷ ಸೆರೆನಾ ವಿಲಿಯಮ್ಸ್ ಯುಎಸ್ ಓಪನ್ ಪ್ರಶಸ್ತಿ ಗೆದ್ದಾಗ ಆಕೆಯ ವಯಸ್ಸು 34.

ಸೆರೆನಾಳ ಅಕ್ಕ ವೀನಸ್ ವಿಲಿಯಮ್ಸ್ ಗೆ ಈಗ 37 ವರ್ಷ. ಅಮೆರಿಕನ್ ಓಪನ್ ಟೆನಿಸ್‌ನಲ್ಲಿ ಹೀಗೆ 37ರ ಹರೆಯದಲ್ಲಿ ಸೆಮಿಫೈನಲ್‌ವರೆಗೆ ತಲುಪಿದ ಇನ್ನೊಬ್ಬ ಆಟಗಾರ್ತಿ ಇಲ್ಲವೇ ಇಲ್ಲ. ಆ ಮಟ್ಟಿಗೆ ವೀನಸ್‌ಳದ್ದು ದಾಖಲೆಯೇ. ಈ ದಾಖಲೆಯನ್ನು ಬಹುಶಃ ಮುರಿಯುವ ಸಾಧ್ಯತೆ ಇರುವುದು ಸೆರೆನಾಗೆ (ಮುಂದಿನ ವರ್ಷ ಮತ್ತೆ ಆಡಿದರೆ) ಮಾತ್ರ ಅನ್ನಿಸುತ್ತೆ. ಆಸ್ಟ್ರೇಲಿಯಾ ಓಪನ್ ಮತ್ತು ವಿಂಬಲ್ಡನ್‌ನಲ್ಲೂ ವೀನಸ್ ಈ ವರ್ಷ ಸೆಮಿಫೈನಲ್ ತಲುಪಿ ಅಚ್ಚರಿ ಮೂಡಿಸಿದ್ದಳು. ಕಳೆದ ಕೆಲವು ವರ್ಷಗಳಿಂದ ಸೆರೆನಾಳ ಚಾಂಪಿಯನ್ ಆಟದ ಅಬ್ಬರದಲ್ಲಿ ವೀನಸ್ ವಿಲಿಯಮ್ಸ್ ಖ್ಯಾತಿ ಮುಚ್ಚಿಹೋದದ್ದು ನಿಜವೇ. ತಂಗಿಯನ್ನು ಸೋಲಿಸಲೆಂದು ವೀನಸ್ ಹಲವು ಸಲ ಪ್ರಯತ್ನಿಸಿದ್ದರೂ ಆಗಿಲ್ಲ. ಹಾಗೆಂದು ವೀನಸ್ ಆಟದ ಸೊಗಸಿಗೆ ಕುಂದುಂಟಾದದ್ದು ಯಾವತ್ತೂ ಇಲ್ಲ. ಸೆರೆನಾ ಮಿಂಚುವುದಕ್ಕಿಂತ ಮುಂಚೆಯೇ ವೀನಸ್ ತನ್ನ ಗೆಲುವಿನ ಓಟವನ್ನು ದಾಟಿಸಿಯಾಗಿದೆ. ವಿಂಬಲ್ಡನ್ ಟೆನಿಸ್‌ನಲ್ಲಿ 2000ನೇ ಇಸವಿಯಿಂದ ಹಿಡಿದು 2008ರವರೆಗೆ ವೀನಸ್‌ಳ ಅತ್ಯುತ್ತಮ ಆಟವನ್ನು ಕಣ್ತುಂಬಿಕೊಂಡವರಿಗೆ ಲೆಕ್ಕವಿಲ್ಲ. 2000, 01, 05, 07 ಮತ್ತು 08ರಲ್ಲಿ ವಿಂಬಲ್ಡನ್ ಓಪನ್ ಪ್ರಶಸ್ತಿಯನ್ನು ಗೆದ್ದು ದಾಖಲೆ ನಿರ್ಮಿಸಿದಾಕೆ ವೀನಸ್. ಯುಎಸ್ ಓಪನ್‌ನಲ್ಲೂ 2000 ಮತ್ತು 2001ರ ಪ್ರಶಸ್ತಿ ಗೆದ್ದು ಸಂಭ್ರಮಿಸಿದವಳು. ಆಗ ಮೂರು ಸಲ ವಿಶ್ವದ 'ನಂಬರ್ ಒನ್ ಸೀಡ್' ಆಟಗಾರ್ತಿ. ಈಕೆಯ ಈ ಯಶಸ್ಸೇ ಮುಂದೆ ತಂಗಿ ಸೆರೆನಾಗೆ ಗೆಲುವಿನ ನಾಗಾಲೋಟಕ್ಕೆ ಪ್ರೇರಣೆಯಾದದ್ದು ಸುಳ್ಳಲ್ಲ.



ಫಿಟ್‌ನೆಸ್ ಎಂದರೆ ಕೇವಲ ದೇಹದ್ದೇ ಅಲ್ಲ, ಅದರ ಜತೆಗೆ ಮಾನಸಿಕ ದೃಢತೆಯೂ ಬೇಕು. ಏನಿಲ್ಲವೆಂದರೂ 2–3 ಗಂಟೆಗಳ ಕಾಲ ಕೋರ್ಟ್‌ನಲ್ಲಿ ನಿರಂತರ ಓಡಾಡುತ್ತಾ ಬಲಿಷ್ಟ ತೋಳುಗಳನ್ನು ಬೀಸುತ್ತಾ ಆಟವಾಡುವುದು ಎಲ್ಲರಿಗೆ ನಿಲುಕುವಂಥದ್ದಲ್ಲ. ವೀನಸ್‌ಳ ಹೆಗ್ಗಳಿಕೆ ಇರುವುದು ಆಕೆಯ ಈ ಫಿಟ್‌ನೆಸ್ ಪಾರಮ್ಯದಲ್ಲಿ. ಕಳೆದ 6 ವರ್ಷಗಳಿಂದ ವೀನಸ್ ಜಾಗ್ರೀನ್ ಸಿಂಡ್ರೋಮ್‌ನಿಂದ ಬಳಲುತ್ತಿದ್ದಾಳೆ. ಇಡೀ ದೇಹದ ಶಕ್ತಿಯನ್ನು ಹೀರಿ ಬಳಲಿಸುವ ರೋಗವಿದು. ಬಾಯಿ ಒಣಗುವುದು, ಕಣ್ಣು ಒಣಗುವುದು, ಸುಖಾಸುಮ್ಮನೆ ಕಣ್ಣೀರು ಬರುವುದು, ಸದಾ ಕಫ ಕೆಮ್ಮು, ಕೈಕಾಲು ಸೆಳೆತ, ಕೀಲುನೋವು, ಥೈರಾಯ್ಡ್– ಹೀಗೆ ಎಲ್ಲದರ ಸಂಗಮವದು. ಇದನ್ನು ಇಟ್ಟುಕೊಂಡೇ ವೀನಸ್ ಯುಎಸ್ ಓಪನ್‌ನಂತಹ ಪ್ರತಿಷ್ಠಿತ ಟೂರ್ನಿಯಲ್ಲಿ ಸೆಮಿಫೈನಲ್‌ವರೆಗೆ ಬಂದಿದ್ದಾಳೆಂದರೆ ಅದು ಅಚ್ಚರಿಯ ಸಂಗತಿಯೇ.

ಅಪ್ಪ ರಿಚರ್ಡ್ ವಿಲಿಯಮ್ಸ್ ಮಗಳ ಮೊದಲ ಕೋಚ್. ಬಾಲ್ಯದಿಂದಲೇ ಟೆನಿಸ್ ಅಭ್ಯಾಸ. ಐದು ಹೆಣ್ಣುಮಕ್ಕಳ ಪೈಕಿ ವೀನಸ್ ಹೆಚ್ಚು ಮುದ್ದಿನ ಮಗಳು. ತೀರಾ ಇತ್ತೀಚೆಗೆ 75ರ ಹರೆಯದ ತಂದೆ, 38ರ ಹರೆಯದ ಎರಡನೇ ಪತ್ನಿಯಿಂದ ಕಿರುಕುಳಕ್ಕೆ ಒಳಗಾಗಿ ಡೈವೋರ್ಸ್‌ಗೆ ಅರ್ಜಿ ಹಾಕಿದಾಗಲೂ ಈ ಮಗಳದ್ದೇ ಆಸರೆ. ಅಪ್ಪ ಎರಡನೇ ಮದುವೆಯಿಂದ ಹೊರಬಂದರೂ ಮಗಳು ಇನ್ನೂ ಮದುವೆಯಾಗಿಲ್ಲ. ವೀನಸ್ ಈಗಲೂ ಸಿಂಗಲ್. ಹತ್ತು ವರ್ಷಗಳ ಹಿಂದೆ ಖ್ಯಾತ ಗಾಲ್ಫರ್ ಹ್ಯಾಂಕ್ ಕೂಹ್ನೆ ಜತೆ ಈಕೆ ಒಡನಾಟ ಹೊಂದಿದ್ದು ಸುದ್ದಿಯಾಗಿತ್ತು. ಆದರೆ ಆತ ಹಳೆಯ ಗೆಳತಿಯನ್ನು ಮದುವೆಯಾದಾಗ ಈ ಸ್ನೇಹ ಮುರಿದುಬಿತ್ತು. ಆಮೇಲೆ ಎರಡು ವರ್ಷ ಒಬ್ಬಳೇ ಇದ್ದ ವೀನಸ್, 2012ರಲ್ಲಿ ಎಲಿಯೊ ಪಿಸ್ ಎಂಬ ತರುಣ ಮಾಡೆಲ್ ಜತೆಗೆ ಗೆಳೆತನ ಬೆಳೆಸಿಕೊಂಡಳು. ಈಕೆಯ ಒಡೆತನದ್ದೇ ಆದ ಎಲೆವೆನ್ ಫ್ಯಾಶನ್ ಬಟ್ಟೆಗಳಿಗೆ ಮಾಡೆಲ್ ಆಗಿದ್ದಾತ ಎಲಿಯೊ ಪಿಸ್. ಮೊನ್ನೆ ಯುಎಸ್ ಓಪನ್ ನಲ್ಲಿ ಸೋತ ಬಳಿಕ ಹರಡಿರುವ ಸುದ್ದಿಯೆಂದರೆ ವೀನಸ್ ಇತ್ತೀಚೆಗೆ ತನ್ನ ಗೆಳೆಯನ ಜತೆಗೆ ರಹಸ್ಯವಾಗಿ ಮದುವೆ ಮಾಡಿಕೊಂಡಿದ್ದಾಳೆ ಎನ್ನುವುದು. ಈಕೆಯ ಕೈಯಲ್ಲಿ ವಿವಾಹದ ರಿಂಗ್ ನೋಡಿರುವುದಾಗಿಯೂ ಪತ್ರಿಕೆಯೊಂದು ಬರೆದಿದೆ. ವೀನಸ್ ಮಾತ್ರ ಅದನ್ನು ಅಲ್ಲಗಳೆದು 'ಈಗಲೂ ನಾನು ಸಿಂಗಲ್' ಎನ್ನುತ್ತಿದ್ದಾಳೆ. 95 ದಶಲಕ್ಷ ಡಾಲರ್ ನಿವ್ವಳ ಆಸ್ತಿ ಹೊಂದಿರುವ, ವಿಶ್ವದ ಎರಡನೇ ಅತ್ಯಂತ ಶ್ರೀಮಂತ ಟೆನಿಸ್ ಆಟಗಾರ್ತಿಯಾಗಿರುವ ವೀನಸ್, ಹತ್ತು ಹಲವು ಬ್ರ್ಯಾಂಡ್‌ಗಳಿಗೆ ವಾಣಿಜ್ಯ ರಾಯಭಾರಿಯೂ ಹೌದು. ಕಳೆದ ವಾರ ಯುಎಸ್ ಓಪನ್‌ನ ಸೆಮಿಫೈನಲ್‌ನಲ್ಲಿ ಗೆದ್ದಿದ್ದರೆ ಈಗ ಈಕೆ ವಿಶ್ವದ ನಂಬರ್ 2ನೇ ಸೀಡ್ ಆಟಗಾರ್ತಿಯಾಗಿ ಮೆರೆಯುತ್ತಿದ್ದಳು. 37ರ ವಯಸ್ಸಿನಲ್ಲಿ ಅದೂ ಒಂದು ದಾಖಲೆಯಾಗುತ್ತಿತ್ತು. ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65